# ಯುದ್ಧ ವಿರೋಧಿ ಜನರ ವೇದಿಕೆ

## ಕರ್ನಾಟಕ

email: janaravedikekarnat09@rediffmail.com
janaravedike@gmail.com

ಗೆ, ದಿನಾಂಕ :

ಮಾನ್ಯ ಪ್ರಧಾನ ಮಂತ್ರಿಗಳು
ಭಾರತ ಸರ್ಕಾರ

**ವಿಷಯ : ತಮ್ಮ ಮೂಲಭೂತ ಹಕ್ಕುಗಳಿಗಾಗಿ ಹೋರಾಡುತ್ತಿರುವ ಆದಿವಾಸಿಗಳು, ದಲಿತರು, ಇನ್ನಿತರರ ಮೇಲೆ ಆಪರೇಷನ್ ಗ್ರೀನ್‌ಹಂಟ್ ಆಪರೇಷನ್ ಗೋದಾವರಿ ಇತ್ಯಾದಿ ಸೇನಾ ಕಾರ್ಯಾಚರಣೆಯನ್ನು ನಿಲ್ಲಿಸಲು ಒತ್ತಾಯಿಸಿ.**

ಭಾರತದ ಅತೀ ಹೆಚ್ಚು ಹಿಂದುಳಿದ ಪ್ರದೇಶಗಳಲ್ಲಿರುವ ಆದಿವಾಸಿಗಳು, ದಲಿತರು, ಮಹಿಳೆಯರು ಇನ್ನಿತರ ಹಿಂದುಳಿದವರು ಬಡತನ ರೇಖೆಗಿಂತಲೂ ಬಹಳ ಕೆಳಗಿನ ಹಂತದಲ್ಲಿದ್ದಾರೆ. ತಮ್ಮ ಬದುಕಿಗಾಗಿ ಕಾಡಿನ ಉತ್ಪತ್ತಿ ಹಾಗೂ ಸಣ್ಣಪುಟ್ಟ ಕೃಷಿ ಚಟುವಟಿಕೆಗಳನ್ನು ನಡೆಸುತ್ತಾರೆ. ಆದಿವಾಸಿಗಳಲ್ಲಿ ಒಂದು ಗಣನೀಯ ವಿಭಾಗ ಇನ್ನೂ ಅಲೆಮಾರಿ ಬೇಸಾಯ ಮಾಡುವ ಹಂತದಲ್ಲಿದ್ದಾರೆ. ಅಲ್ಲದೆ ಅವರಿಗೆ ತಮ್ಮದೇ ಎನ್ನುವ ಸ್ವಂತ ಭೂಮಿ ಇಲ್ಲ. ಸ್ಥಿರ ಬೇಸಾಯಕ್ಕೆ ಬದಲಿಸಿಕೊಂಡಿರುವ ಆದಿವಾಸಿಗಳು ಮುಖ್ಯವಾಗಿ ಸಂಘಟಿತರಾಗಿರುವ ಆದಿವಾಸಿಗಳಲ್ಲಿ ಕಂಡುಬರುತ್ತಾರೆ. ಆದರೂ ಅವರಿಗೆ ಭೂಮಿ ಹಕ್ಕು ದಾಖಲೆಗಳು ಇಲ್ಲ. ಆಂಧ್ರ, ಮಹಾರಾಷ್ಟ್ರ, ಒರಿಸ್ಸಾ, ಮಧ್ಯಪ್ರದೇಶ, ಜಾರ್ಖಂಡ್, ಬಿಹಾರ, ಛತ್ತೀಸ್‌ಘಡ್, ಪಶ್ಚಿಮ ಬಂಗಾಳ, ಮೊದಲಾದ ರಾಜ್ಯಗಳಲ್ಲಿ ಆದಿವಾಸಿಗಳು, ದಲಿತರು ಇನ್ನಿತರ ಹಿಂದುಳಿದವರು ದೊಡ್ಡ ಮಟ್ಟದಲ್ಲಿ ಸಂಘಟಿತರಾಗಿದ್ದಾರೆ. ಇದಕ್ಕೆ ಮುಖ್ಯವಾದ ಕಾರಣ ಬೃಹತ್ ಬಂಡವಾಳ ಕೇಂದ್ರಿತ ಭಾರಿ ಯೋಜನೆಗಳಾದ ದೊಡ್ಡ ಡ್ಯಾಂಗಳು, ವಿದ್ಯುತ್ ಸ್ಥಾವರಗಳು, ಗಣಿಗಾರಿಕೆಗಳು, ವಿಶೇಷ ಆರ್ಥಿಕ ವಲಯಗಳು (SEZ) ಮೊದಲಾದವುಗಳಿಂದಾಗಿ ಅವರ ಪ್ರಾಣ ಹಾಗೂ ಬದುಕುಗಳಿಗೇ ಸಂಚಕಾರಗಳನ್ನು ತಂದಿರುವುದೇ ಆಗಿದೆ. ಬೃಹತ್ ಸಂಖ್ಯೆಯಲ್ಲಿ ಅವರನ್ನು ಒಕ್ಕಲೆಬ್ಬಿಸಿಬಿಡುವ ಕಾರ್ಯಕ್ಕೆ ಸರ್ಕಾರಗಳು ಮುಂದಾಗಿವೆ. ನರ್ಮದಾ ಯೋಜನೆಯಿಂದ ನಿರ್ವಸಿತರಾಗಿರುವವರ ಗೋಳು ಹೇಳತೀರದಂತಾಗಿದೆ. ಜನರು ನರ್ಮದಾ ಯೋಜನೆಯನ್ನು ಭಾರೀ ಸಂಖ್ಯೆಯಲ್ಲಿ ವಿರೋಧಿಸಿದ್ದರೂ ಬಲಾತ್ಕಾರದಿಂದ ಯೋಜನೆಯನ್ನು ಜನರ ಮೇಲೆ ಹೇರಲಾಗಿದೆ. ಇದೇ ರೀತಿಯಲ್ಲಿ SEZಗಳಿಗೆ ಪೊಸ್ಕೊ, ಜಿಂದಾಲ್, ಮಿತ್ತಲ್, ವೇದಾಂತ, ಎಸ್ಸಾರ್, ಟಾಟಾಗಳಂತಹ ಕಂಪನಿಗಳಿಗೆ ಜನರು ಹಾಗೂ ಪರಿಸರಕ್ಕೆ ಭಾರಿ ಅನಾಹುತಗಳನ್ನು ತಂದೊಡ್ಡುವ ಗಣಿಗಾರಿಕೆಗಳನ್ನು ನಡೆಸಲು ಸರ್ಕಾರಗಳು ಉದಾರವಾಗಿ ಅವಕಾಶಗಳನ್ನು ನೀಡಿವೆ. ಇವೆಲ್ಲದರ ಭೀಕರ ಪರಿಣಾಮಗಳನ್ನು ಈಗಾಗಲೇ ಜನರು ಅನುಭವಿಸುತ್ತಿದ್ದಾರೆ. ಮೊದಲಿನಿಂದಲೂ

ಇಂತಹವುಗಳನ್ನು ವಿರೋಧಿಸಿ ಪ್ರತಿಭಟನೆ, ರ್‍ಯಾಲಿಗಳನ್ನು ನಡೆಸಿ ಹಲವಾರು ಮನವಿಗಳನ್ನು ಸರ್ಕಾರಗಳಿಗೆ ನೀಡಿದ್ದರೂ ಅಂತಹ ಯಾವುದೇ ಪ್ರತಿಭಟನೆಗಳಿಗೆ ಮನವಿಗಳಿಗೆ ಯಾವ ಬೆಲೆಯನ್ನೂ ನೀಡದೆ ಇಂತಹ ಮಾರಕ ಯೋಜನೆಗಳನ್ನು ಸಮಾಜದ ಅತ್ಯಂತ ಕೆಳಸ್ತರದ ಜನರ ಮೇಲೆ ಬಲಾತ್ಕಾರದಿಂದ ಹೇರಿ ಅವರನ್ನು ಒಕ್ಕಲೆಬ್ಬಿಸಿ ಬಿಸುಡುವ ಕಾರ್ಯಗಳನ್ನು ಸರ್ಕಾರಗಳು ನಿರಂತರವಾಗಿ ನಡೆಸುತ್ತಾ ಬರುತ್ತಿವೆ. ಕರ್ನಾಟಕದ ನಾಗರಹೊಳೆ, ಬಂಡೀಪುರ, ಕೈಗಾ ಅಣುಸ್ಥಾವರ, ಸೀಬರ್ಡ್ ನೌಕಾನೆಲೆ ಮೊದಲಾದ ಯೋಜನೆಗಳಿಂದಾಗಿ ನಿರ್ವಸಿತರಾದವರಿಗೆ ಬದಲಿ ವ್ಯವಸ್ಥೆಯನ್ನು ಸರಿಯಾಗಿ ಇನ್ನೂ ಕಲ್ಪಿಸಿಲ್ಲ. ಅಭದ್ರತೆ ಹಾಗೂ ಅತಂತ್ರ ಪರಿಸ್ಥಿತಿಯಲ್ಲಿ ಬದುಕುತ್ತಿದ್ದಾರೆ.

ಅದೂ ಅಲ್ಲದೆ ದೇಶದ ಬಹುಸಂಖ್ಯಾತ ಜನರಿಗೆ ಮೂಲಭೂತ ಹಕ್ಕುಗಳಾದ ಭೂಮಿ, ವಸತಿ, ನೀರು, ರಸ್ತೆ, ಆಸ್ಪತ್ರೆ, ಶಾಲೆ, ಸಾರಿಗೆ ಮೊದಲಾದವುಗಳು ಮರೀಚಿಕೆಯಾಗಿವೆ. ಜೊತೆಗೆ ಕನಿಷ್ಠ ಗುಡಿಸಲುಗಳಲ್ಲಿ ಹೇಗಾದರೂ ಜೀವನ ನಡೆಸಿಕೊಳ್ಳೋಣ ಎಂದರೂ ಅಂತಹ ಅವಕಾಶಗಳನ್ನೂ ಅವರಿಗೆ ನಿರಾಕರಿಸುವ ಮಟ್ಟಕ್ಕೆ ಸರ್ಕಾರಗಳು ಇಳಿಯುತ್ತಿರುವಾಗ ಅನಿವಾರ್ಯವಾಗಿ ಅಂತಹ ಜನರು ಉಗ್ರ ರೂಪದ ಹೋರಾಟಗಳಿಗೆ ಇಳಿಯುತ್ತಿದ್ದಾರೆ. ಕರ್ನಾಟಕದ ಮಲೆನಾಡು ಹಾಗೂ ಕರಾವಳಿ ಪ್ರದೇಶಗಳಲ್ಲೂ ಗಿರಿಜನರು ಹಿಂದುಳಿದವರು ಈ ರೀತಿಯ ಉಗ್ರ ಪ್ರತಿಭಟನೆಗಳಿಗೆ ಇಳಿದಿದ್ದಾರೆ. ಅದಕ್ಕೆ ಕಾರಣ ಬಲವಂತದ ಒಕ್ಕಲೆಬ್ಬಿಸುವಿಕೆ ಹಾಗೂ ಸಾಮಾಜಿಕ ಆರ್ಥಿಕ ಅಭದ್ರತೆಗಳೇ ಆಗಿವೆ. ಈ ರೀತಿ ಉಗ್ರ ರೂಪ ತಾಳಿ ಪ್ರಾಣ ಭಯವನ್ನೂ ಲೆಕ್ಕಿಸದೆ ಹೋರಾಟಕ್ಕೆ ಇಳಿಯಲು ಇರುವ ಕಾರಣಗಳೇನು ಎಂಬುದನ್ನು ಸರ್ಕಾರಗಳು ನೋಡಬೇಕು. ಅದು ನಿಸ್ಸಂಶಯವಾಗಿ ಈ ಜನರ ಮೇಲಾಗುತ್ತಿರುವ ನಿರಂತರ ಶೋಷಣೆ, ದಮನ ದೌರ್ಜನ್ಯಗಳು, ಅವಕಾಶ ವಂಚನೆ, ಬದುಕುವ ಹಕ್ಕಿನ ಹರಣಗಳೇ ಆಗಿವೆ. ಹೆತ್ತ ಮಕ್ಕಳೇ ಆದರೂ ತಮಗೆ ಅನ್ಯಾಯವಾದಾಗ ಹೆತ್ತವರ ವಿರುದ್ಧವೇ ತಿರುಗಿ ಬೀಳುವುದನ್ನು ನಾವು ನೋಡುತ್ತಿರುವಾಗ ನಿರಂತರವಾಗಿ ಅತ್ಯಂತ ಕೆಳಮಟ್ಟದಲ್ಲಿ ಬದುಕುತ್ತಿರುವ ಜನರು ತಮ್ಮ ಮೇಲಾಗುತ್ತಿರುವ ನಿರಂತರ ಶೋಷಣೆ, ಅವಕಾಶ ವಂಚನೆ ಕೊನೆಗೆ ಬದುಕಲೂ ಸಾಧ್ಯವಾಗದಂತೆ ಮಾಡುವುದನ್ನು ವಿರೋಧಿಸಿ ಉಗ್ರ ರೂಪದ ಪ್ರತಿಭಟನೆಗಳಿಗೆ ಇಳಿಯುವುದು ಸಹಜವೇ ಆಗಿದೆ. ಈ ಮೂಲಭೂತ ಸಮಸ್ಯೆಗಳನ್ನು ಬಗೆಹರಿಸುವ ಬದಲಿಗೆ ಸರ್ಕಾರಗಳು ಪೊಲೀಸ್, ಪ್ಯಾರಾಮಿಲಿಟರಿ ಪಡೆಗಳನ್ನು ಕಳುಹಿಸಿ ಅಮಾಯಕ ಜನರನ್ನು ಕಗ್ಗೊಲೆ ಮಾಡುವ, ಬಂಧಿಸಿ ಚಿತ್ರಹಿಂಸೆ ಮಾಡುವ, ಮಹಿಳೆಯರಮೇಲೆ ಅತ್ಯಾಚಾರಗಳನ್ನು ನಡೆಸುವ, ಹಳ್ಳಿಗಳನ್ನೇ ಸುಟ್ಟುಹಾಕುವ, ಹಳ್ಳಿಗಳನ್ನೆಲ್ಲಾ ಖಾಲಿ ಮಾಡಿಸಿ, ಅಲ್ಲಿನ ಜನರನ್ನು ಕ್ಯಾಂಪುಗಳಲ್ಲಿ ಕೂಡಿಹಾಕುವ, ಕ್ಯಾಂಪುಗಳಲ್ಲೂ ಕೂಡ ಕೊಲೆ, ಕಣ್ಮರೆ, ಅತ್ಯಾಚಾರಗಳನ್ನು ನಡೆಸುವ, ಆದಿವಾಸಿ ಬಡಜನರ ಮೇಲೆ ಅಂತಹ ಜನರನ್ನೇ ಎತ್ತಿಕಟ್ಟಿ ಸೆಲ್ವಜುಡುಂ, ಸೇಂದ್ರದಂತಹ ಪಡೆಗಳನ್ನು ಮಾಡಿ ಮಾರಣಾಂತಿಕ ದಾಳಿಗಳನ್ನು ನಡೆಸುವ ಕಾರ್ಯಗಳಿಗೆ ಸರ್ಕಾರಗಳು ಇಳಿಯುತ್ತಿವೆ. ಇಂತಹವುಗಳು ಪ್ರಜಾತಾಂತ್ರಿಕ ವ್ಯವಸ್ಥೆಯಲ್ಲಿ ಯಾವುದೇ ರೀತಿಯಲ್ಲೂ ಕಾಣಿಸಬಾರದಿತ್ತು. ಇಂತಹ ಕಾರ್ಯಗಳನ್ನು ಯಾರೂ ಕೂಡ ಸಮರ್ಥಿಸಲು ಸಾಧ್ಯವಾಗುವುದಿಲ್ಲ.

ಈಗ ಭಾರತ ಸರ್ಕಾರ ಮಾವೋವಾದಿಗಳಿಂದ ಪ್ರದೇಶಗಳನ್ನು ಬಿಡಿಸಿಕೊಳ್ಳುವ ಕಾರಣ ನೀಡಿ ಆಪರೇಷನ್ ಗ್ರೀನ್ ಹಂಟ್ ಆಪರೇಷನ್ ಗೋದಾವರಿ ಆಪರೇಷನ್ ಲಾಲ್‌ಗಡ್‌ಗಳಂತಹ ಸೇನಾ ಕಾರ್ಯಾಚರಣೆಗಳನ್ನು ಮಾಡುವುದರ ಮೂಲಕ ಉರಿಯುವ ಬೆಂಕಿಗೆ ತುಪ್ಪ ಸುರಿಯುವ ಕೆಲಸ ಮಾಡುತ್ತಿವೆ. ಇದು ಆದಿವಾಸಿ ದಲಿತ ಜನ ಸಾಮಾನ್ಯರ ಮೇಲೆ ನೇರವಾಗಿ ಕೇಂದ್ರೀಕರಿಸಲ್ಪಡುತ್ತವೆ. ತನ್ನದೇ ಪ್ರಜೆಗಳ ಮೆಲೆ ಸರ್ಕಾರವೊಂದು ಈ ರೀತಿ ಸೇನಾ ಕಾರ್ಯಾಚರಣೆ ನಡೆಸಿ ಅವರ ದನಿಗಳನ್ನು ಹತ್ತಿಕ್ಕುವ ಕಾರ್ಯದಲ್ಲಿ ತೊಡಗುತ್ತಿರುವುದು ಪ್ರಜಾತಾಂತ್ರಿಕವಾದುದಲ್ಲ. ಅಲ್ಲದೆ ಈ ರೀತಿಯ ಸೇನಾ ಕ್ರಮಗಳು, ಅಂತರ್ಯುದ್ಧವಾಗಿ ಪರಿಣಮಿಸಿ ಬೇರೆಡೆಗೂ ವಿಸ್ತರಿಸುವ ಸಾಧ್ಯತೆಗಳೂ ಇವೆ. ಆಪರೇಷನ್ ಲಾಲ್‌ಗಡದ ನಂತರ PSBJC ಸಶಸ್ತ್ರ ಮಿಲಿಷಿಯಾ ಪಡೆಯನ್ನು ಸ್ಥಾಪಿಸಿಕೊಂಡು ಕಾದಾಡುತ್ತಿರುವುದನ್ನು ಇಲ್ಲಿ ಗಮನಿಸಬೇಕಾಗಿದೆ. ಇಂತಹವುಗಳಿಂದ ಸಾಮಾಜಿಕವಾಗಿ, ಆರ್ಥಿಕವಾಗಿ ದೇಶ ಹಾಗೂ ಜನರ ಮೇಲೆ ಗಂಭೀರ ಪರಿಣಾಮಗಳು ಉಂಟಾಗುತ್ತವೆ. ಜನರ ಮೂಲಭೂತ ಸಮಸ್ಯೆಗಳು ಹಾಗೂ ಅವರ ದನಿಗಳನ್ನು ಕಡೆಗಣಿಸಿ ನಡೆಸುವ ಸೇನಾ ಕಾರ್ಯಾಚರಣೆಗಳು ಯಶಸ್ವಿಯಾಗುವುದಿಲ್ಲ. ಪ್ರಜಾತಾಂತ್ರಿಕ ವ್ಯವಸ್ಥೆಯೊಂದರಲ್ಲಿ ಆ ರೀತಿ ಜನರ ಮೇಲೆ ನಡೆಯುವ ಸೇನಾ ಕಾರ್ಯಚರಣೆಗಳು ಒಪ್ಪತಕ್ಕಂತಹವಲ್ಲ.

ಹಾಗಾಗಿ ಆದಿವಾಸಿ ದಲಿತ ಹಿಂದುಳಿದ ಜನರನ್ನು ನೇರವಾಗಿ ಗುರಿ ಮಾಡುವ ಕಾರ್ಯಾಚರಣೆಗಳನ್ನು ಕೂಡಲೇ ನಿಲ್ಲಿಸಿ ಜನರ ಸಮಸ್ಯೆಗಳನ್ನು ಪರಿಹರಿಸಿ ಅವರ ಬದುಕಿಗೆ ಭದ್ರತೆ ಕಲ್ಪಿಸಬೇಕೆಂದು ಈ ಮೂಲಕ ತಮ್ಮಲ್ಲಿ ಕೇಳಿಕೊಳ್ಳುತ್ತಿದ್ದೇವೆ.

## ಹಕ್ಕೊತ್ತಾಯಗಳು

* **ಭಾರತ ಸರ್ಕಾರ ರಾಜ್ಯ ಸರ್ಕಾರಗಳೊಂದಿಗೆ ಸೇರಿಕೊಂಡು ನಡೆಸಲು ಹೊರಟಿರುವ 'ಆಪರೇಷನ್ ಗ್ರೀನ್ ಹಂಟ್' 'ಆಪರೇಷನ್ ಗೋದಾವರಿ' ಇತ್ಯಾದಿ ಹೆಸರಿನ ಜನರ ಮೇಲಿನ ಯುದ್ಧವನ್ನು ನಿಲ್ಲಿಸಬೇಕು.**
* **ದಲಿತರು ಆದಿವಾಸಿಗಳು, ಭೂ ಹೀನ ನಿರ್ಗತಿಕ ಜನರು ನೆಲೆಸಿರುವ ಪ್ರದೇಶಗಳಿಂದ ಸೇನೆ ಹಾಗೂ ಪೊಲೀಸ್ ಪಡೆಗಳನ್ನು ಕೂಡಲೇ ವಾಪಸ್ ಕರೆಸಿಕೊಳ್ಳಬೇಕು.**
* **ಜನಸಾಮಾನ್ಯರ ಪ್ರಜಾಸತ್ತಾತ್ಮಕ ಹೋರಾಟಗಳನ್ನು ಹಾಗೂ ಜನರು ಪರಿಹರಿಸಲು ಒತ್ತಾಯಿಸುತ್ತಿರುವ ಸಮಸ್ಯೆಗಳನ್ನು ಆದ್ಯತೆಯಾಗಿಟ್ಟು ಪರಿಹರಿಸಬೇಕು.**
* **ದೇಶದ ಅಮೂಲ್ಯವಾದ ಖನಿಜ, ಅರಣ್ಯ, ನೀರು ಮುಂತಾದವನ್ನು ವಿದೇಶಿ ಹಾಗೂ ದಲ್ಲಾಳಿ ಕಂಪನಿಗಳು ಲೂಟಿ ಮಾಡಲು ಬಿಡಬಾರದು.**
* **ಜನರು ಹಾಗೂ ಪ್ರಕೃತಿ ವಿನಾಶಕ್ಕೆ ಕಾರಣವಾಗುವ ಯಾವುದೇ ಭಾರೀ ಯೋಜನೆಗಳನ್ನು ಕೈ ಬಿಟ್ಟು ಜನರು ಹಾಗೂ ಪ್ರಾಕೃತಿಕ ಪರಿಸರಕ್ಕೆ ಪೂರಕವಾಗುವ ಸಣ್ಣ ಮಧ್ಯಮ ಗಾತ್ರದ ಯೋಜನೆಗಳನ್ನು ಜಾರಿಗೊಳಿಸಬೇಕು.**

* **ನವ ವಸಾಹತುಗಳಾಗಿ ಮಾರ್ಪಡುವ ಜನರ ಬದುಕು ಹಾಗೂ ಪ್ರಕೃತಿಕ ಹಾನಿಗೆ ಕಾರಣವಾಗುವ (SEZ)ಗಳಂತಹ ಯೋಜನೆಗಳನ್ನು ರದ್ದು ಮಾಡಬೇಕು.**
* **ದೇಶದ ದಲಿತರು, ಆದಿವಾಸಿಗಳು, ಬಹುಸಂಖ್ಯಾತ ಜನರು ಅನುಭವಿಸುತ್ತಿರುವ ತೀವ್ರತರವಾದ ಶೋಷಣೆ ಆರ್ಥಿಕ ಅಸಮಾನತೆಗಳನ್ನು ಹೋಗಲಾಡಿಸಲು ವೈಜ್ಞಾನಿಕವಾಗಿ ಭೂಮಿ ಹಂಚಿಕೆ ನಡೆಯಬೇಕು.**
* **ಹೆಚ್ಚುವರಿ ಭೂಮಿ ಹಾಗೂ ಇನ್ನಿತರ ಅಕ್ರಮ ಸಂಪತ್ತನ್ನು ವಶಪಡಿಸಿಕೊಂಡು ಎಲ್ಲಾ ಜನರಿಗೆ ಸಿಗುವಂತೆ ಮಾಡಬೇಕು.**
* **ಈಗಾಗಲೇ ಹತ್ತು ಹಲವು ಯೋಜನೆಗಳ ನೆಪದಲ್ಲಿ ನಿರ್ಗತಿಕರಾಗಿ ಬದುಕುವ ಹಾಗೂ ಆದಾಯ ಮೂಲಗಳನ್ನು ಕಳೆದುಕೊಂಡಿರುವ ಲಕ್ಷಾಂತರ ಜನರಿಗೆ ಕೂಡಲೇ ಭೂಮಿ ಇತರ ಎಲ್ಲಾ ಸವಲತ್ತು ಒದಗಿಸಿಕೊಡಬೇಕು.**

## ಸಹಭಾಗಿತ್ವದ ಸಂಘಟನೆಗಳು

ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್ (PUCL) - ಕರ್ನಾಟಕ

ದಲಿತ ಸಂಘರ್ಷ ಸಮಿತಿ - ಚಾಮರಾಜನಗರ

ಜೈ ಭೀಮ್ ಯುವಕರ ಸಂಘ - ಮೈಸೂರು

ಉತ್ತರ ಕರ್ನಾಟಕ ರಕ್ಷಣಾ ವೇದಿಕೆ-ಬೆಳಗಾಂ, ಧಾರವಾಡ, ಗದಗ

ಜನಕಲಾ ಸಂಘ - ಮೈಸೂರು

ಐ.ಐ.ಎಸ್ಸಿ. ಕನ್‌ಸರ್ನ್ - ಬೆಂಗಳೂರು

ದಲಿತ ಸಂಘರ್ಷ ಸಮಿತಿ, ಬೆಂಗಳೂರು

ಪಕ್ಷಾತೀತ ರೈತ ಹೋರಾಟ ಸಮಿತಿ-ಧಾರವಾಡ, ಗದಗ

ರಾಜ್ಯ ಕೂಲಿಗಾರರ ಸಂಘ - ಮೈಸೂರು

ಕರ್ನಾಟಕ ಯೂತ್ ಫೆಡರೇಷನ್-ಹುಬ್ಬಳ್ಳಿ - ಧಾರವಾಡ

ಸಂಗೊಳ್ಳಿ ರಾಯಣ್ಣ ಕನ್ನಡಿಗರ ವೇದಿಕೆ - ಬೆಂಗಳೂರು

ಸ್ವಾಭಿಮಾನಿ ವೇದಿಕೆ - ಮೈಸೂರು

ಜಾತಿವಿನಾಶ ವೇದಿಕೆ - ಬೆಂಗಳೂರು

ಸ್ಲಂ ಕ್ರಿಯಾವೇದಿಕೆ -ಬೆಂಗಳೂರು

ಹುಬ್ಬಳ್ಳಿ-ಧಾರವಾಡ ಮ್ಯಾಕ್ಸಿಕ್ಯಾಬ್ ಅಸೋಷಿಯೆಷನ್ಸ್

ಕೈಗಾರಿಕಾ ನಗರ ಕನ್ನಡಿಗರ ಯುವಕ ಸಂಘ - ಬೆಂಗಳೂರು

ಅಖಿಲ ಭಾರತ ಕೃಷಿ ಕಾರ್ಮಿಕ ಸಂಘ - ಮೈಸೂರು

ಸೃಷ್ಟಿ ದೃಷ್ಯ ಮಾಧ್ಯಮ ಸಂಸ್ಥೆ, ಬೆಂಗಳೂರು

ಧಾರವಾಡ ಆಟೋಚಾಲಕರ ಸಂಘ

ಪ್ರಗತಿಪರ ವಿಚಾರವೇದಿಕೆ-ದೇವದುರ್ಗ

ಅಂಬೇಡ್ಕರ್ ಯುವ ಸೇನೆ - ಬೆಂಗಳೂರು

ಜನ ಸಾಂಸ್ಕೃತಿಕ ಸಂಘ - ಮೈಸೂರು

ಮುಸ್ಲಿಂ ಮೈನಾರಿಟಿ ಕಮಿಟಿ - ಚಿಕ್ಕಮಗಳೂರು

ಪರಿಶಿಷ್ಟಜಾತಿ-ಪರಿಶಿಷ್ಟ ಪಂಗಡಗಳ ಹಿತರಕ್ಷಣಾ ಒಕ್ಕೂಟ-ಮೂಡಿಗೆರೆ

ಸ್ಪಂದನ ವೇದಿಕೆ-ಕಿರುಗುಂದ- ಮೂಡಿಗೆರೆ

ಕಾವೇರಿ ಕನ್ನಡಿಗರ ಯುವಕ ಸಂಘ - ಬೆಂಗಳೂರು

ರೈತಕೂಲಿ ಸಂಗ್ರಾಮ ಸಮಿತಿ (RCSS) - ಮೈಸೂರು

ಯುವ ಬರಹಗಾರರ ವೇದಿಕೆ -ಬೆಳಗಾಂ, ಗದಗ, ಬಾಗಲಕೋಟೆ

ದಲಿತ್ ಪ್ಯಾಂಥರ್ಸ್ ಆಫ್ ಇಂಡಿಯಾ - ಬೆಂಗಳೂರು

ಅಭಿಮನ್ಯು ಪತ್ರಿಕಾ ಬಳಗ - ಬೆಂಗಳೂರು

ಕರ್ನಾಟಕ ಸೌಹಾರ್ಧ ವೇದಿಕೆ - ಬಾಗಲಕೋಟೆ-ಕೊಪ್ಪಳ

ದಲಿತ ಸಂಘಟನೆಗಳ ಒಕ್ಕೂಟ - ಶಿವಮೊಗ್ಗ

ಅಗ್ನಿ ಅಂಕುರ ಪತ್ರಿಕಾ ಬಳಗ - ಶಹಾಪುರ, ಗುಲ್ಬರ್ಗ

ಜಾಗೃತ ವಿದ್ಯಾರ್ಥಿ ಯುವಜನ ವೇದಿಕೆ - ಮೂಡಿಗೆರೆ

ಸಂಗಮ - ಬೆಂಗಳೂರು

ಕರ್ನಾಟಕ ರೈತಕೂಲಿ ಸಂಘ

ಜಲಜ ಮಿತ್ರ ರಂಗವೇದಿಕೆ - ಬಾಗಲ ಕೋಟೆ

ನಾಗರಿಕ ಹಕ್ಕುಗಳ ವೇದಿಕೆ - ಕೋಲಾರ ಜಿಲ್ಲಾ ಸಮಿತಿ

ಕರ್ನಾಟಕ ಜನಾಂದೋಲನ ಸಂಘಟನೆ - ಬೆಂಗಳೂರು

ಪ್ರಗತಿಪರ ಪ್ರಜಾ ವೇದಿಕೆ - ಮೈಸೂರು

ಗಿರಿಜನ ಹೋರಾಟ ಸಮಿತಿ - ಮೂಡಿಗೆರೆ

ಕರ್ನಾಟಕ ರಂಗ ಜಾಗೃತ ವೇದಿಕೆ - ಬೆಂಗಳೂರು

ಐಕ್ಯತಾ ಪ್ರಕಾಶನ

ನವ ಸಮಾಜ ನಿರ್ಮಾಣ ವೇದಿಕೆ - ನಾಗಮಂಗಲ

ಅಂಬೇಡ್ಕರ್ ಯುವಕರ ಸಂಘ - ಮೂಡಿಗೆರೆ

ಮಾದಿಗ ಮೀಸಲಾತಿ ಹೋರಾಟ ಸಮಿತಿ - ಬಾಗಲ ಕೋಟೆ

ಅಹಿಂದ - ನಂಜನಗೂಡು

ಜನಪರ ವೇದಿಕೆ - ಮೂಡಿಗೆರೆ

ದಲಿತ ಸಂಘರ್ಷ ಸಮಿತಿ - ಬಾಗಲ ಕೋಟೆ

ದಲಿತ ಪ್ಯಾಂಥರ್ಸ್ ಆಫ್ ಇಂಡಿಯಾ - ಬಾಗಲ ಕೋಟೆ

ರಂಗ ಕೋಟೆ - ಬಾಗಲ ಕೋಟೆ

ಹೈದರಾಬಾದ್ ಕರ್ನಾಟಕ ನಾಗರಿಕ ಹಕ್ಕುಗಳ ಸಮಿತಿ

**ಸಂಪರ್ಕ ವಿಳಾಸ**

**ನಂ. 2110, 3ನೇ ತಿರುವು, ಅಶೋಕಪುರಂ, ಮೈಸೂರು - 570 008**

## ಸಹಿಗಳು